ಒಂದು ಸಾಧನ. ಬರೆಯುವ ಕೆಲಸ ಮಾತ್ರ ನನ್ನ ಮನಸ್ಸಿನ ಏಕಾಗ್ರತೆಯನ್ನು ಹಿಡಿದಿಟ್ಟುಕೊಳ್ಳಬಲ್ಲದು ಅನ್ನಿಸುತ್ತೆ... ಬರೆಯದೆ ಹೋಗಿದ್ದರೆ ಇಲ್ಲಿಯತನಕ ನಾನು ಬದುಕಿರುತ್ತಲೇ ಇರಲಿಲ್ಲವೇನೋ ಅನ್ನಿಸುತ್ತದೆ. ಒಂದು ವೇಳೆ ಹಾಗೇನಾದರೂ ಆಗಿ ಬದುಕಿದ್ದರೆ ಹುಚ್ಚನಂತೆ ಎಲ್ಲೋ ಅಲೆಯುತ್ತಿರುತ್ತಿದ್ದನೇನೋ...

**◆ 'ಸಾಂಸ್ಕೃತಿಕ ಉಳಿಯುವಿಕೆ' ಅಂದ್ರೆ...**

ಇವತ್ತು ನಾವು ಸಂಸ್ಕೃತಿ ಮತ್ತು ಅದರ ಹಲವು ಒಳ್ಳೆಯ/ಕೆಟ್ಟ ಪರಿಣಾಮಗಳಿಂದ ಆವೃತಗೊಂಡಿದ್ದೇವೆ, ಅಲ್ವೇ? ಹೀಗಿದ್ದಾಗ, ಇದರಿಂದ ಹೊರಬರುವ ಪರ್ಯಾಯ ಮಾರ್ಗಗಳನ್ನು ನಾವು ಹುಡುಕುತ್ತ ಇರುತ್ತೇವೆ. ಪ್ರತಿಯೊಬ್ಬ ಲೇಖಕ ಹೀಗೆ ಕಂಡುಕೊಳ್ಳುವ ತನ್ನದೇ ಅಭಿವ್ಯಕ್ತಿಯ ದಾರಿಗಳೇ ನನ್ನ ಮಟ್ಟಿಗೆ 'ಸಾಂಸ್ಕೃತಿಕ ಉಳಿಯುವಿಕೆ'.

**◆ ನೀವು ಬರೆದ ಮೊಟ್ಟಮೊದಲ ಕಥೆಯ ಅನುಭವದ ಬಗ್ಗೆ ಹೇಳಬಹುದಾ?**

ಆರನೇ ಕ್ಲಾಸಿನಲ್ಲಿ ಓದುತ್ತಿದ್ದಾಗ ನಾನು ಮೊದಲ ಕಥೆ ಬರೆದದ್ದು. ಅದನ್ನು ಎಲ್ಲಿಗೆ ಕಳಿಸಬೇಕು, ಹೇಗೆ ಕಳಿಸುವುದು, ಪ್ರಕಟ ಮಾಡುವುದು ಹೇಗೆ, ಇತ್ಯಾದಿ ಯಾವುದೂ ನನಗೆ ಗೊತ್ತಿರಲಿಲ್ಲ. ಇದರ ಕುರಿತು ಹೇಳಿಕೊಡುವವಂತಹವರು ನನಗೆ ಕುಟುಂಬದಲ್ಲಾಗಲೀ, ಹೊರಗಡೆಯಾಗಲೀ ಯಾರೂ ಇರಲಿಲ್ಲ. ಕೊನೆಗೆ, ನಾನು ನಮ್ಮೂರಿನ ಒಬ್ಬ ಪತ್ರಿಕೆಯ ಏಜೆಂಟನನ್ನು ಇದರ ಬಗ್ಗೆ ಕೇಳಿ, ಅವನಿಂದ ವಿಳಾಸ ಪಡೆದುಕೊಂಡು ಒಂದು ಪತ್ರಿಕೆಗೆ ಕಳಿಸಿದೆ. ಕಥೆ ಪ್ರಕಟ ಆಗಲಿಲ್ಲ. ಹೀಗೇ ಸತತವಾಗಿ ಏಳು ವರ್ಷಗಳ ಕಾಲ ಕಥೆ ಬರೆದೆ, ಪತ್ರಿಕೆಗೆ ಕಳಿಸಿದೆ. ಎಲ್ಲೂ ಪ್ರಕಟಗೊಳ್ಳಲಿಲ್ಲ, ನಿರಾಸೆಯಾಯಿತು. ಕಟ್ಟಕಡೆಗೆ ನನ್ನ ಹತ್ತೊಂಬತ್ತನೇ ವಯಸ್ಸಿನಲ್ಲಿ ಮೊದಲ ಕಥೆಯು 'ಚಂದ್ರಿಕ' ಎನ್ನುವ ಮಲಯಾಳಂ ವಾರಪತ್ರಿಕೆಯಲ್ಲಿ ಪ್ರಕಟ ಆಯ್ತು. ಪತ್ರಿಕೆಯ ಎಲ್ಲೋ ಒಂದು ಮೂಲೆಯಲ್ಲಿ ಅದು ಅಚ್ಚಾಗಿದ್ದರೂ, ನನಗೆ ಸಂತೋಷದಿಂದ ಆ ದಿನ ರಾತ್ರಿಯಿಡೀ ನಿದ್ರೆ ಬರಲಿಲ್ಲ. ಆನಂತರ ಎಷ್ಟೋ ವರ್ಷಗಳ ಮೇಲೆ ನಾನು ಅದೇ ಪತ್ರಿಕೆಯ ಸಂಪಾದಕನಾಗಿ ಏಳೂವರೆ ವರ್ಷ ಕೆಲಸ ಮಾಡಿದೆ!

**◆ 'ಮಮ್ಮುಮುಕ್ರಿ' ನಿಮ್ಮ ಅದ್ಭುತ ಕಥೆಗಳಲ್ಲಿ ಒಂದು. ಅದು ಮೈತಳೆದ ಬಗ್ಗೆ ಹೇಳಬಹುದಾ?**

ತುಂಬ ವರ್ಷಗಳ ಹಿಂದೆ ನನ್ನ ಮನೆಯಿಂದ ಸುಮಾರು ಆರು ಕಿಲೋಮೀಟರ್ ದೂರದಲ್ಲಿರುವ ಒಂದು ಮಸೀದಿಯಲ್ಲಿ ಅದು ಜೀವ ಪಡೆಯಿತು. ನನ್ನ ಆಧ್ಯಾತ್ಮಿಕ ಕನಸುಗಳನ್ನು ಅದಕ್ಕೆ ಸೇರಿಸುತ್ತ ಹೋದೆ ಅಷ್ಟೇ... ಮಮ್ಮುಮುಕ್ರಿ ಈಗಲೂ ನನ್ನ ಕನಸಿನಲ್ಲಿ ಬರುತ್ತಾರೆ. ಅವರು ತೀರಿಕೊಂಡು ಬಹಳ ವರ್ಷಗಳಾದವು...

**◆ 'ಆಧ್ಯಾತ್ಮಿಕ ಕನಸು' ಅಂದರೆ?**

ಯೇಸುಕ್ರಿಸ್ತ ಹೇಳ್ತಾನೆ, ಮನುಷ್ಯ ರೊಟ್ಟಿಯಿಂದಷ್ಟೇ ಬದುಕುವುದಿಲ್ಲ ಅಂತ. ಎಷ್ಟೋ ಜನರ ಹಾಗೆಯೇ ನಾನೂ ಕೂಡ ಭೌತಿಕತೆಯ ಕಡಲಿನಲ್ಲಿ ಧ್ವಂಸಗೊಳ್ಳುತ್ತಿರುವ ಪ್ರಯಾಣಿಕ ಮಾತ್ರ. ಇಂತಹ ಕಡಲಿನ ನಟ್ಟನಡುವಿನಲ್ಲಿ ಕನಸು ಕಾಣುವುದೆಂದರೆ ನನ್ನ ಪ್ರಕಾರ ಅದು ಆಧ್ಯಾತ್ಮಿಕತೆ. ನಾನು ಅ–ಧಾರ್ಮಿಕ ಆಧ್ಯಾತ್ಮಿಕತೆಯೊಳಗೆ ಆಶ್ರಯ ಪಡೆಯುತ್ತೇನೆ. ಆದರೆ, ಇದು ಭೌತಿಕತೆಯಿಂದ ತಪ್ಪಿಸಿಕೊಳ್ಳುವುದು ಅಂತ ಅರ್ಥ ಅಲ್ಲ. ನನ್ನ ಆಧ್ಯಾತ್ಮಿಕ ಕಲ್ಪನಾ ಪ್ರಪಂಚವೆಂದರೆ, ಅಲ್ಲಿ ಈ ಭೂಮಿಯ ಎಲ್ಲ ಮನುಷ್ಯರೂ ತಂತಮ್ಮ ಸಂಪತ್ತು, ಅಧಿಕಾರ, ಕೀರ್ತಿಯ ಆಸೆಯನ್ನು ಸ್ವಯಂಮಿತಿಗೊಳಿಸಿಕೊಳ್ಳುವುದು. ಬರವಣಿಗೆಯಲ್ಲಿ ತೊಡಗಿದಾಗ ನಾನು ಇವೆಲ್ಲದರ ಬಗ್ಗೆ ಆಗಾಗ್ಗೆ ಕನಸು ಕಾಣುತ್ತೇನೆ. ನನಗೆ ಸಾಹಿತ್ಯ ಅನ್ನುವಂತದ್ದು ಓದುವಾಗ ಮತ್ತು ಬರೆಯುವಾಗ ಕಾಣುವ ಎಚ್ಚರದ ಕನಸು. ಮಮ್ಮುಮುಕ್ರಿಯ ಪಾತ್ರದಲ್ಲಿ ಕ್ರಿಸ್ತನ ಆಧ್ಯಾತ್ಮಿಕತೆಯನ್ನು ಅಪರೋಕ್ಷವಾಗಿ ಮುಟ್ಟಲು ಯತ್ನಿಸಿದ್ದೇನೆ.

**◆ ನಿಮ್ಮನ್ನು ಪ್ರಭಾವಿಸಿದ ಲೇಖಕರು ಯಾರು ಯಾರು?**

ನನ್ನ ನಂಬಿಕೆ ಅಂದ್ರೆ, ಈ ಪ್ರಪಂಚದ ಎಲ್ಲ ಲೇಖಕರಿಂದಲೂ ನಾವು ಅಪ್ರಜ್ಞಾಪೂರ್ವಕವಾಗಿ ಚೈತನ್ಯವನ್ನು ಪಡೆಯುತ್ತ ಬರೆಯುತ್ತಲಿರುತ್ತೇವೆ ಅಂತ. ಹತ್ತನೇ ಶತಮಾನದ ರೂಮಿ, ಹನ್ನೆರಡನೆ ಶತಮಾನದ ಅಕ್ಕಮಹಾದೇವಿ, ಬಸವಣ್ಣ, ಅಲ್ಲಮ, 1906ರಲ್ಲಿ ಹುಟ್ಟಿದ ಪುದುಮೈಪಿತ್ತನ್, ಇಪ್ಪತ್ತನೇ